

## ಸಮಾಚಾರ ಸಣ್ಣದಲ್ಲ

### ಕಾಂಗ್ರೆಸ್ ಸರಕಾರದಿಂದ ಯಾವ ನ್ಯಾಯದ ನಿರೀಕ್ಷೆ?

**ಹೈದರಾಬಾದ್:** ಪಕ್ಕದ ರಾಜ್ಯ ಕರ್ನಾಟಕ ದಲ್ಲಿ ಕಾಂಗ್ರೆಸ್ ಸರಕಾರ ಇದೆ. ಹಾಗಿದ್ದೂ ಹುಬ್ಬಳ್ಳಿ ಯಲ್ಲಿ ಕಾಂಗ್ರೆಸ್ ಪಾಲಿಕೆ ಸದಸ್ಯ ನ ಪುತ್ರಿಯ ಕೊಲೆ ಆಗಿದೆ.



ಇನ್ನು ಕಾಂಗ್ರೆಸ್ ಸರಕಾರ ದಿಂದ ಯಾವ ನ್ಯಾಯ ನಿರೀಕ್ಷೆ ಮಾಡಲು ಸಾಧ್ಯ? ಎಂದು ಕೇಂದ್ರ ಸಚಿವ ಅನುರಾಗ ಠಾಕೂರ್ ಪ್ರಶ್ನೆ ಮಾಡಿದ್ದಾರೆ. ರಾಹುಲ್ ಗಾಂಧಿ ಅವರ ದ್ವೇಷ ಉಂಟು ಮಾಡುವ ಅಂಗಡಿ ಕರ್ನಾಟಕದಲ್ಲಿ ಅದಾಗಲೇ ಶುರುವಾಗಿದೆ. ಅದಕ್ಕೆ ನೇಹಾ ಪಾಟೀಲ್ ಕೊಲೆಯೇ ಪ್ರತ್ಯಕ್ಷ ಸಾಕ್ಷಿ ಎಂದು ಠಾಕೂರ್ ವಾಗ್ದಾಳಿ ನಡೆಸಿದರು. ನೇಹಾ ಕುಟುಂಬದ ಸದಸ್ಯರು ಸಿಬಿಐ ತನಿಖೆಗೆ ಒತ್ತಾಯಿಸಬೇಕು. ಆಗಷ್ಟೇ ತನಿಖೆ ಸರಿಯಾಗಿ ನಡೆದು ನೊಂದ ಕುಟುಂಬಕ್ಕೆ ನ್ಯಾಯ ಸಿಗಲು ಸಾಧ್ಯ ಎಂದು ಸಚಿವರು ಹೇಳಿದರು.

### ಚು. ಬಾಂಡ್: ಎಸ್ಐಟಿ ತನಿಖೆ ಕೋರಿ ಪಿಐಎಲ್

**ದೆಹಲಿ:** ಚುನಾವಣಾ ಬಾಂಡ್ ಗಳಲ್ಲಿ ಅಕ್ರಮ ನಡೆದಿದ್ದು, ವಿಶೇಷ ತನಿಖಾ ತಂಡದ ಮೂಲಕ ತನಿಖೆ ನಡೆಸಲು ಆದೇಶಿಸ ಬೇಕು ಎಂದು ಮನವಿ



ಮಾಡಿ ದೆಹಲಿಯ ಎರಡು ಸರ್ಕಾರೇತರ ಸಂಸ್ಥೆಗಳು ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿವೆ. ಅರ್ಜಿಗಳ ಪರವಾಗಿ ವಕೀಲ ಪ್ರಶಾಂತ್ ಭೂಷಣ್ ವಕಾಲತು ವಹಿಸಿದ್ದಾರೆ. ನಷ್ಟ ಅನುಭವಿಸಿದ ಕಂಪೆನಿ ಗಳೂ ಚುನಾವಣಾ ಬಾಂಡ್ ಖರೀದಿಸಿವೆ. ರಾಜಕಾರಣಿಗಳು, ಕಾರ್ಪೊರೇಟ್ ಸಂಸ್ಥೆಗಳು ತನಿಖಾ ಸಂಸ್ಥೆಗಳ ಅಪವಿತ್ರ ಮೈತ್ರಿ ಈ ಚುನಾವಣಾ ಬಾಂಡ್ ಗಳಲ್ಲಿ ಕಾಣಬರುತ್ತಿದೆ. ಹಾಗಾಗಿ ಎಸ್ ಐ ಟಿ ತನಿಖೆ ಅಗತ್ಯವಿದೆ. ಅದೂ ಸುಪ್ರೀಂಕೋರ್ಟ್ ಉಸ್ತುವಾರಿ ಯಲ್ಲಿ ನಡೆಯ ಬೇಕಿದೆ ಎಂದು ಅರ್ಜಿದಾರರು ಕೋರಿದ್ದಾರೆ. ಕಾಮನ್ ಕಾಸ್ ಮತ್ತು ಸೆಂಟರ್ ಫಾರ್ ಪಬ್ಲಿಕ್ ಇಂಟರೆಸ್ಟ್ ಲಿಟಿಗೇಶನ್ ಸಂಸ್ಥೆ ಗಳು ಅರ್ಜಿ ಸಲ್ಲಿಸಿವೆ.

## ಈ ಕ್ಷೇತ್ರ ಗೊತ್ತ?



### ಗುಣ

**ಮಾಧವರಾವ್ ಸಿಂಧಿಯಾ ಮತ್ತು ಜ್ಯೋತಿರಾದಿತ್ಯ ಸಿಂಧಿಯಾ ಅವರ ಭದ್ರಕೋಟೆಯಾಗಿದ್ದ ಮಧ್ಯಪ್ರದೇಶದ ಗುಣದಲ್ಲಿ 2019ರಲ್ಲಿ ಬಿಜೆಪಿ ಗೆದ್ದಿತ್ತು. ಆಗ ಕಾಂಗ್ರೆಸ್‌ನಿಂದ ಸ್ಪರ್ಧೆ ಮಾಡಿದ್ದ ಜ್ಯೋತಿರಾದಿತ್ಯ ಸಿಂಧಿಯಾ ಸೋತಿದ್ದರು. ಈಗ ಅವರು ಬಿಜೆಪಿಯಲ್ಲಿದ್ದು, ಇದೇ ಪಕ್ಷದಿಂದ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಅಷ್ಟೇ ಅಲ್ಲ, ಈ ಕ್ಷೇತ್ರ ಸಿಂಧಿಯಾ ರಾಜಮನೆತನದ ಭದ್ರಕೋಟೆ ಕೂಡ ಹೌದು.**

**ಇತಿಹಾಸ**



1952ರಲ್ಲಿ ರಚನೆಯಾಗಿರುವ ಈ ಕ್ಷೇತ್ರದಲ್ಲಿ ಮೊದಲ ಬಾರಿಗೆ ಹಿಂದು ಮಹಾಸಭಾದ ವಿ.ಜಿ. ದೇಶಪಾಂಡೆ ಗೆದ್ದಿದ್ದರು. ಬಳಿಕ 1957ರಲ್ಲಿ ಕಾಂಗ್ರೆಸ್‌ನಿಂದ ವಿಜಯ ರಾಜೇ ಸಿಂಧಿಯಾ ಆಯ್ಕೆಯಾಗಿದ್ದರು. 1962ರಲ್ಲಿ ಕಾಂಗ್ರೆಸ್‌ನ ರಾಮ್‌ಸಹಾಯಿ ಪಾಂಡೆ, 1967ರಲ್ಲಿ ಸ್ವತಂತ್ರ ಪಾರ್ಟಿಯಿಂದ ವಿಜಯ ರಾಜೇ ಸಿಂಧಿಯಾ ಗೆದ್ದಿದ್ದರು. 1971ರಲ್ಲಿ ಬಿಜೆಪಿ, 1977ರಲ್ಲಿ ಸ್ವತಂತ್ರ ಮತ್ತು 1980ರಲ್ಲಿ ಕಾಂಗ್ರೆಸ್‌ನಿಂದ ಮಾಧವರಾವ್ ಸಿಂಧಿಯಾ ಇಲ್ಲಿಂದ ಗೆಲುವು ಸಾಧಿಸಿದ್ದರು. 1984ರಲ್ಲಿ ಮಹೇಂದ್ರ ಸಿಂಗ್ ಯಾದವ್ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಿದ್ದು, ಇವರು ಗೆದ್ದಿದ್ದರು.

1989, 1991, 1996 ಮತ್ತು 1998ರಲ್ಲಿ ಬಿಜೆಪಿಯಿಂದ ವಿಜಯ ರಾಜೇ ಸಿಂಧಿಯಾ ಗೆದ್ದಿದ್ದರು. 1999ರಲ್ಲಿ ಕಾಂಗ್ರೆಸ್‌ನಿಂದ ಮತ್ತೆ ಮಾಧವರಾವ್ ಸಿಂಧಿಯಾ ಗೆಲುವು ಸಾಧಿಸಿದ್ದರು. 2002, 2004, 2009, 2014ರಲ್ಲಿ ಕಾಂಗ್ರೆಸ್‌ನಿಂದಲೇ ಜ್ಯೋತಿರಾದಿತ್ಯ ಸಿಂಧಿಯಾ ಅವರು ಸತತವಾಗಿ ಜಯ ಗಳಿಸಿದ್ದರು. ಆದರೆ, 2019ರಲ್ಲಿ ಬಿಜೆಪಿಯ ಕೃಷ್ಣ ಪಾಲ್ ಯಾದವ್ ವಿರುದ್ಧ ಸೋತಿದ್ದರು. ಈಗ ಬಿಜೆಪಿಯಿಂದ ಜ್ಯೋತಿರಾದಿತ್ಯ ಸಿಂಧಿಯಾ, ಕಾಂಗ್ರೆಸ್‌ನಿಂದ ರಾವ್ ಯಾದವೇಂದ್ರ ಸಿಂಗ್ ಯಾದವ್ ಸ್ಪರ್ಧೆ ಮಾಡಿದ್ದಾರೆ.

ಇಲ್ಲಿ ವಿಜಯರಾಜೇ ಸಿಂಧಿಯಾ, ಅವರ ಪುತ್ರ ಮಾಧವರಾವ್ ಸಿಂಧಿಯಾ ಮತ್ತು ಅವರ ಪುತ್ರ ಜ್ಯೋತಿರಾದಿತ್ಯ ಸಿಂಧಿಯಾ ಅವರೇ ಬಹುಕಾಲ ಗೆದ್ದಿದ್ದಾರೆ. ಹೀಗಾಗಿ ಇದೊಂದು ರೀತಿ ರಾಜಮನೆತನದ ಕ್ಷೇತ್ರವಾಗಿತ್ತು. ಈ ಕ್ಷೇತ್ರದಲ್ಲಿ ಶೇ.90 ಹಿಂದು, ಶೇ.10ರಷ್ಟು ಇತರ ಧರ್ಮೀಯರಿದ್ದಾರೆ.

**ಮೂರು ಫಲಿತಾಂಶ**

- **2019** - ಕೃಷ್ಣ ಪಾಲ್ ಸಿಂಗ್ ಯಾದವ್
- **2014** - ಜ್ಯೋತಿರಾದಿತ್ಯ ಸಿಂಧಿಯಾ
- **2009** - ಜ್ಯೋತಿರಾದಿತ್ಯ ಸಿಂಧಿಯಾ

**ಕ್ಷೇತ್ರ ವಿಶೇಷ**

- ಸಿಂಧಿಯಾ ಮನೆತನದ ಮೂರು ತಲೆಮಾರುಗಳು ಇಲ್ಲಿ ಗೆದ್ದಿವೆ
- ಮೊದಲ ಬಾರಿಗೆ ಹಿಂದೂ ಮಹಾಸಭಾದ ಅಭ್ಯರ್ಥಿ ಗೆಲುವು
- ರಾಜಮಾತೆ ವಿಜಯರಾಜೇ ಸಿಂಧಿಯಾ ಮೊದಲು ಗೆದ್ದವರು

# ಇವಿಎಂ- ವಿವಿಪ್ಯಾಟ್ ಮತ ಪರಿಶೀಲನೆ: ತೀರ್ಪು ಕಾಯ್ದಿರಿಸಿದ ಸುಪ್ರೀಂ ಕೋರ್ಟ್

## ಇವಿಎಂ, ವಿವಿ ಪ್ಯಾಟ್ ಕಾರ್ಯ ವೈಖರಿ ಬಗ್ಗೆ ದ್ವಿ ಸದಸ್ಯ ಪೀಠಕ್ಕೆ ಚು.ಆಯೋಗದ ಮಾಹಿತಿ

**ದೆಹಲಿ:** ವಿದ್ಯುನ್ಮಾನ ಮತ ಯಂತ್ರ (ಇವಿಎಂ) ಹಾಗೂ ವಿವಿಪ್ಯಾಟ್ ನಲ್ಲಿ ದಾಖಲಾಗಿರುವ ಮತಗಳನ್ನು ಸಂಪೂರ್ಣ ತಾಳೆ ಹಾಕಬೇಕು ಎಂದು ಕೋರಿದ್ದ ಅರ್ಜಿಗಳ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಬುಧವಾರ ತೀರ್ಪನ್ನು ಕಾಯ್ದಿರಿಸಿ ಆದೇಶ ನೀಡಿದೆ.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಂಕರ್ ದತ್ತಾ ಅವರ ದ್ವಿಸದಸ್ಯ ಪೀಠ ವಿದ್ಯುನ್ಮಾನ ಮತಯಂತ್ರಗಳ (ಇವಿಎಂ) ಕಾರ್ಯನಿರ್ವಹಣೆಗೆ ಸಂಬಂಧಿಸಿದ ಐದು ಪ್ರಶ್ನೆಗಳಿಗೆ ಚುನಾವಣಾ ಆಯೋಗದ ಅಧಿಕಾರಿಯಿಂದ ಬುಧವಾರ ಮಧ್ಯಾಹ್ನ ಉತ್ತರಗಳನ್ನು ಪಡೆದುಕೊಂಡ ನಂತರ ತೀರ್ಪನ್ನು ಕಾಯ್ದಿರಿಸಿತು.

ಇವಿಎಂ ಕಾರ್ಯನಿರ್ವಹಣೆ ಕುರಿತ ಪ್ರಶ್ನೆಗಳಿಗೆ ಉತ್ತರಿಸಲು ಈ ಹಿಂದೆ ನ್ಯಾಯಾಲಯದ ಮುಂದೆ ವಾದ ಮಂಡಿಸಿದ್ದ ಹಿರಿಯ ಉಪ ಚುನಾವಣಾ ಆಯುಕ್ತ ನಿತೇಶ್ ಕುಮಾರ್ ವ್ಯಾಸ್ ಅವರನ್ನು ಮಧ್ಯಾಹ್ನ 2 ಗಂಟೆಗೆ ನ್ಯಾಯಾಲಯಕ್ಕೆ ಪೀಠ ಕರೆಸಿತ್ತು. ಇವಿಎಂಗಳ ಬಗ್ಗೆ ಪದೇ ಪದೇ ಕೇಳಲಾಗುವ ಪ್ರಶ್ನೆಗಳಿಗೆ ಚುನಾವಣಾ ಆಯೋಗ ನೀಡಿದ ಉತ್ತರಗಳಲ್ಲಿ ಗೊಂದಲ ಇರುವುದರಿಂದ ಕೆಲ ಅಂಶಗಳ ಬಗ್ಗೆ ಸ್ಪಷ್ಟೀಕರಣ ಅಗತ್ಯವಿದೆ ಎಂದು ಪೀಠ ಹೇಳಿತ್ತು.

ಇವಿಎಂನಲ್ಲಿ ಮತಗಳ ಸಂಗ್ರಹ, ಇವಿಎಂ ಕಂಟ್ರೋಲಿಂಗ್ ಯೂನಿಟ್ ನ ಮೈಕ್ರೋ ಚಿಪ್ ಮತ್ತಿತರ ಅಂಶಗಳ ಕುರಿತಂತೆ ಚುನಾವಣಾ ಆಯೋಗದಿಂದ ನ್ಯಾಯಾಲಯ ಸ್ಪಷ್ಟನೆ ಕೇಳಿತ್ತು. ವಿವಿಪ್ಯಾಟ್ ಸ್ವತಂತ್ರ ಮತ ಪರಿಶೀಲನಾ ವ್ಯವಸ್ಥೆಯಾಗಿದ್ದು, ಮತದಾರರು ತಮ್ಮ ಮತಗಳನ್ನು ಚಲಾಯಿಸಲಾದ ಅಭ್ಯರ್ಥಿಗೆ ಹೋಗಿದೆಯೆ ಎಂಬುದನ್ನು ಖಾತರಿ ಪಡಿಸಿಕೊಳ್ಳಲು ಅವಕಾಶ ಮಾಡಿಕೊಡುತ್ತದೆ.

ಮತದಾರರ ಸಂತೃಪ್ತಿ ಮತ್ತು ಚುನಾವಣಾ ವ್ಯವಸ್ಥೆಯಲ್ಲಿ ನಂಬಿಕೆಯ ಪ್ರಾಮುಖ್ಯತೆಯನ್ನು ಒತ್ತಿಹೇಳಿದ ನ್ಯಾಯಪೀಠ, ಇವಿಎಂ ಕಾರ್ಯನಿರ್ವಹಣಾ ವಿಧಾನವನ್ನು ಅನುಮಾನಿಸದಂತೆ ಹೇಳಿತು. ಅಲ್ಲದೇ ಮತಪತ್ರಗಳ ಬಳಕೆ ಕಾಲಕ್ಕೆ ಹಿಂದಿರುಗುವುದಕ್ಕೆ ನಿರ್ದೇಶನ ನೀಡುವಂತೆ ಕೋರಿದ ಅರ್ಜಿದಾರರಿಗೆ, ಚುನಾವಣಾ ಆಯೋಗ ಉತ್ತಮ ಕೆಲಸ ಮಾಡಿದಾಗ ಪ್ರಶಂಸಿಸುವಂತೆ ಕಿವಿಮಾತು ಹೇಳಿತು.




**ಅರ್ಜಿದಾರರ ತಕರಾರು**

ವಿವಿಪ್ಯಾಟ್ ಯಂತ್ರಗಳಲ್ಲಿನ ಪಾರದರ್ಶಕ ಗಾಜನ್ನು ಬದಲಾಯಿಸಿ ಅಪಾರದರ್ಶಕ ಗಾಜು ಅಳವಡಿಸಿದ 2017ರ ಚುನಾವಣಾ ಆಯೋಗದ ನಿರ್ಧಾರ ರದ್ದುಗೊಳಿಸುವಂತೆ ಅರ್ಜಿದಾರರಾದ ಎನ್‌ಜಿಒ 'ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್' (ಎಡಿಆರ್) ಪರ ವಕೀಲ ಪ್ರಶಾಂತ್ ಭೂಷಣ್ ವಾದಿಸಿದರು. 7 ಸೆಕೆಂಡು ಲೈಟ್ ಆನ್ ಆಗಿರುವಾಗ ಮಾತ್ರ ಬದಲಾದ ಗಾಜಿನ ಮೂಲಕ ಮತದಾರರು ಮತದಾನ ಖಾತರಿ ಪಡಿಸುವ ಚೀಟಿಯನ್ನು ನೋಡಬಹುದಾಗಿದೆ ಅಷ್ಟೇ ಎಂದು ಅರ್ಜಿದಾರರು ದೂರಿದ್ದಾರೆ.

**ಆಯೋಗ ಸಾಂವಿಧಾನಿಕ ಸಂಸ್ಥೆ**

ಚುನಾವಣಾ ಆಯೋಗ ಒಂದು ಸಾಂವಿಧಾನಿಕ ಸಂಸ್ಥೆಯಾಗಿದೆ. ಹೀಗಿರುವಾಗ ಒಂದು ಸಾಂವಿಧಾನಿಕ ಸಂಸ್ಥೆ ಮತ್ತು ಅದು ನಡೆಸುವ ಎಲ್ಲಾ ಚಟುವಟಿಕೆ ಗಳನ್ನು ಸುಪ್ರೀಂಕೋರ್ಟ್ ನಿಯಂತ್ರಣ ಮಾಡಲು ಸಾಧ್ಯವಿಲ್ಲ. ಒಂದು ಹಂತದವರೆಗಷ್ಟೇ ನ್ಯಾಯಾಲಯ ಮಧ್ಯ ಪ್ರವೇಶಿಸಲು ಸಾಧ್ಯ. ಇದನ್ನು ಅರ್ಜಿದಾರರು ಅರಿಯಬೇಕು ಎಂದು ದ್ವಿ ಸದಸ್ಯ ಪೀಠ ಅಭಿಪ್ರಾಯಪಟ್ಟಿದೆ.

# ಮೊದಲ ಹಂತ ಮತದಾನ ನಂತರ ಮೋದಿ ವಿಚಲಿತ

## ಕ್ಷುಲ್ಲಕ ರಾಜಕಾರಣಿಯಂತೆ ವರ್ತಿಸುತ್ತಿದ್ದಾರೆ: ಖರ್ಗೆ



**ತಿರುವನಂತಪುರಂ:** ಲೋಕಸಭೆ ಚುನಾವಣೆಯ ಮೊದಲ ಹಂತದ ಮತದಾನ ಮುಗಿದ ನಂತರ ಪ್ರಧಾನಿ ನರೇಂದ್ರ ಮೋದಿ ಬಹಳ ವಿಚಲಿತರಾಗಿದ್ದಾರೆ. ಪರಿಣಾಮ ಕ್ಷುಲ್ಲಕ ರಾಜಕಾರಣಿಯಂತೆ ವರ್ತಿಸುತ್ತಿದ್ದಾರೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಬುಧವಾರ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಮೊದಲ ಹಂತದ ಮತದಾನ ಕಾಂಗ್ರೆಸ್ ಪರವಾಗಿದೆ ಎಂದು ತಿಳಿದು ಮೋದಿ ವಿಚಲಿತರಾಗಿದ್ದಾರೆ ಮತ್ತು ಗೋಚರಿಸದ ಮತದಾರರ ಬಗ್ಗೆ ಆತಂಕಗೊಂಡಿದ್ದಾರೆ. ಹೀಗಾಗಿ ಧಾರ್ಮಿಕ ವಿಚಾರ ಮುಂದಿಟ್ಟುಕೊಂಡು ಕಾಂಗ್ರೆಸ್ ಪಕ್ಷವನ್ನು ಟೀಕಿಸುತ್ತಿದ್ದಾರೆ ಎಂದು ಮಲ್ಲಿಕಾರ್ಜುನ ಖರ್ಗೆ ಆಕ್ಷೇಪ ವ್ಯಕ್ತಪಡಿಸಿದರು.

ತಿರುವನಂತಪುರಂ ಇಂದಿರಾ ಭವನದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಖರ್ಗೆ, ಕಾಂಗ್ರೆಸ್ ಅವರಿಗೆ ಏನೂ ಅಲ್ಲ, ಪ್ರಧಾನಿ ಮೋದಿ ನಮ್ಮ ಬಗ್ಗೆ ಯಾಕೆ ತಲೆಕೆಡಿಸಿಕೊಳ್ಳಬೇಕು?' ಎಂದು ವ್ಯಂಗ್ಯವಾಗಿ ಪ್ರಶ್ನಿಸಿದರು.

ತಿರುವನಂತಪುರಂ ಗೆ ಆಗಮಿಸಿದ ಖರ್ಗೆ ಅವರು, ಎರಡು ವರ್ಷಗಳ ಹಿಂದೆ ಕಾಂಗ್ರೆಸ್ ಅಧ್ಯಕ್ಷರಾದ ನಂತರ ಮೊದಲ ಬಾರಿಗೆ ಇಂದಿರಾ ಭವನಕ್ಕೆ ಭೇಟಿ ನೀಡಿದರು.

2019 ರ ಲೋಕಸಭಾ ಚುನಾವಣೆ ಸಮಯದಲ್ಲಿ ಎಲ್ಲಾ ಭಾರತೀಯರ ಬ್ಯಾಂಕ್ ಖಾತೆಗಳಿಗೆ ತಲಾ 15 ಲಕ್ಷ ರು. ಜಮೆ ಮಾಡುವುದಾಗಿ ಮೋದಿ ಹೇಳಿದ್ದರು. ಆದರೆ ಅದು ದೊಡ್ಡ ಸುಳ್ಳು ಎಂದು ಜನತೆಗೆ ಗೊತ್ತಾಗಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಟೀಕಿಸಿದರು.

2 ಕೋಟಿ ಉದ್ಯೋಗ ಸೃಷ್ಟಿಯಾಗಲಿದೆ ಎಂಬ ಮೋದಿ ಭರವಸೆಯೂ ಕನಸಾಗಿಯೇ ಉಳಿದಿದೆ ಎಂದು ಖರ್ಗೆ ಟೀಕಿಸಿದರು.

ಮೋದಿ ಹತಾಶರಾಗಿದ್ದಾರೆ. ನಾನು ಚುನಾವಣಾ ಪ್ರಚಾರಕ್ಕಾಗಿ 10-12 ರಾಜ್ಯಗಳಲ್ಲಿ ಪ್ರವಾಸ ಮಾಡಿದ್ದೇನೆ ಮತ್ತು ಸಾರ್ವಜನಿಕರಿಂದ ಮತ್ತು ಮತದಾರರಿಂದ ಉತ್ತಮ ವರದಿಗಳನ್ನು ಪಡೆಯುತ್ತಿದ್ದೇನೆ. ಮೋದಿಯವರು ನಮ್ಮ ದೇಶದ ಇತಿಹಾಸದ ಬಗ್ಗೆ ಹೆಚ್ಚು ಓದಬೇಕು ಮತ್ತು ವಿಭಜಕ ರಾಜಕೀಯದಿಂದ ದೇಶವನ್ನು ಹೇಗೆ ಒಗ್ಗೂಡಿಸಬೇಕೆಂದು ಕಲಿಯಬೇಕು ಎಂದು ಕುಟುಕಿದರು.

**ಮೋದಿ ವಾಷಿಂಗ್ ಮೆಷೀನ್**

ಮೋದಿ ಬಳಿ ಬೃಹತ್ ವಾಷಿಂಗ್ ಮೆಷಿನ್ ಸಿಕ್ಕಿದೆ ಎಂದು ಅಣಕಿಸಿದ ಮಲ್ಲಿಕಾರ್ಜುನ ಖರ್ಗೆ, ಬಿಜೆಪಿ ಸೇರುವ ಕಾಂಗ್ರೆಸ್ ನಾಯಕರಿಗೆ ಭ್ರಷ್ಟಾಚಾರ ಪ್ರಕರಣಗಳಿಂದ ಕ್ಲೀನ್ ಚಿಟ್ ನೀಡಲಾಗುತ್ತಿದೆ ಎಂದು ವ್ಯಂಗ್ಯವಾಡಿದ್ದಾರೆ.

# ಭಾಷಣ ವೇಳೆ ಕುಸಿದ ಸಚಿವ ನಿತಿನ್ ಗಡ್ಕರಿ

## ಮಹಾರಾಷ್ಟ್ರದ ಚುನಾವಣಾ ರ‍್ಯಾಲಿಯಲ್ಲಿ ನಡೆದ ಘಟನೆ

**ಯವತ್ಮಾಲ್:** ಪೂರ್ವ ಮಹಾರಾಷ್ಟ್ರದ ಯವತ್ಮಾಲ್ ಜಿಲ್ಲೆಯಲ್ಲಿ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡುತ್ತಿದ್ದ ಕೇಂದ್ರ ಸಚಿವ ನಿತಿನ್ ಗಡ್ಕರಿ(66) ಅವರು ಬುಧವಾರ ಇದ್ದಕ್ಕಿದ್ದಂತೆ ಪ್ರಜ್ಞೆ ತಪ್ಪಿ ಕುಸಿದು ಬಿದ್ದ ಘಟನೆ ನಡೆದಿದೆ.




ಯವತ್ಮಾಲ್-ವಾಶಿಮ್ ಲೋಕಸಭಾ ಕ್ಷೇತ್ರದ ಪುಸಾದ್ ನಗರದಲ್ಲಿ ಜನರನ್ನು ಉದ್ದೇಶಿಸಿ ಮಾತನಾಡುತ್ತಿದ್ದಾಗ ಗಡ್ಕರಿ ಅವರು ಪ್ರಜ್ಞೆ ತಪ್ಪಿ ಬಿದ್ದರು. ತಕ್ಷಣ ಅವರನ್ನು ಅಂಗರಕ್ಷಕರು ಹಾಗೂ ಬಿಜೆಪಿ ನಾಯಕರು ಧಾವಿಸಿ ಆಸ್ಪತ್ರೆ ಕರೆದೊಯ್ದರು.

ಇದೇ ಕಾರ್ಯಕ್ರಮದಲ್ಲಿ ವೈದ್ಯರೋಬ್ಬರು ಇದ್ದ ಕಾರಣ ಗಡ್ಕರಿ ಅವರನ್ನು ತಕ್ಷಣ ಪರೀಕ್ಷೆ ಮಾಡಿದರು. ಆದಷ್ಟು ಬೇಗ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಹೇಳಿದರು.

ಮಹಾರಾಷ್ಟ್ರದ ಪುಸಾದ್ನಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಬಿಸಿಲಿನ ಕಾರಣದಿಂದ ನಾನು ಅಸ್ವಸ್ಥನಾದೆ. ಆದರೆ ಈಗ ಸಂಪೂರ್ಣ ಸರಿಯಾಗಿದ್ದೇನೆ ಮತ್ತು ಮುಂದಿನ ಪ್ರಚಾರ ಸಭೆಯಲ್ಲಿ ಭಾಗವಹಿಸಲು ವರುದ್ಗ್ ಹೋಗುತ್ತಿದ್ದೇನೆ ಎಂದು ನಿತಿನ್ ಗಡ್ಕರಿ ಅವರು ಎಕ್ಸ್ ನಲ್ಲಿ ಸಂದೇಶ ನೀಡಿದ್ದಾರೆ.

# ಗೋವಾ 2 ಕ್ಷೇತ್ರದಲ್ಲಿ ತಲಾ 8 ಅಭ್ಯರ್ಥಿಗಳು

**ಪಣಜಿ:** ಪ್ರಸಕ್ತ ಲೋಕಸಭೆ ಚುನಾವಣೆಗೆ ಗೋವಾದ ಎರಡೂ ಕ್ಷೇತ್ರಗಳಿಂದ ಒಟ್ಟು 16 ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ಉತ್ತರ ಮತ್ತು ದಕ್ಷಿಣದಲ್ಲಿ ತಲಾ ಮೂವರು ಸ್ವತಂತ್ರ ಅಭ್ಯರ್ಥಿಗಳಿದ್ದಾರೆ. ಅಲ್ಲದೇ ಬಹುಜನ ಸಮಾಜ ಪಕ್ಷ(ಬಿಎಸ್ಪಿ), ಅಖಿಲ ಭಾರತೀಯ ಪರಿವಾರ ಪಕ್ಷ ಮತ್ತು ಭ್ರಷ್ಟಾಚಾರ ನಿರ್ಮೂಲನಾ ಪಕ್ಷದ ಅಭ್ಯರ್ಥಿಗಳೂ ಕಣದಲ್ಲಿದ್ದಾರೆ.

ಗೋವಾದಲ್ಲಿ ಕಾಂಗ್ರೆಸ್, ಬಿಜೆಪಿ ಮತ್ತು ಆರ್ಜಿ ಅಭ್ಯರ್ಥಿಗಳ ನಡುವೆಯೇ ಪ್ರಮುಖ ಸ್ಪರ್ಧೆ ಏರ್ಪಟ್ಟಿದ್ದರೂ, ಎರಡೂ ಕ್ಷೇತ್ರಗಳ ಇತರ ಅಭ್ಯರ್ಥಿಗಳು ಯಾರು ಎಂಬ ಕುತೂಹಲ ಮತದಾರರಲ್ಲಿದೆ. ನಾಮಪತ್ರ ಹಿಂಪಡೆಯುವ ದಿನ ಯಾವುದೇ ಅಭ್ಯರ್ಥಿ ನಾಮಪತ್ರ ಹಿಂಪಡೆಯದ ಕಾರಣ ರಾಜ್ಯದಲ್ಲಿ ಉತ್ತರ ಮತ್ತು ದಕ್ಷಿಣದಲ್ಲಿ ತಲಾ ಎಂಟು ಅಭ್ಯರ್ಥಿಗಳು ಕಣದಲ್ಲಿದ್ದಾರೆ ಎಂಬುದು ಸ್ಪಷ್ಟವಾಗಿದೆ.

ರೆಬೆಲಿಯನ್ ಗೋವಾನ್ಸ್ (ಆರ್ ಜಿ) ಪಕ್ಷದ ಅಭ್ಯರ್ಥಿಗಳು ಇಂಡಿಯ ಮೈತ್ರಿಗೆ ಮುಂದಾದರೂ ಷರತ್ತು ಒಪ್ಪಿ ಗೆಯಾಗದ ಕಾರಣ ಆರ್ ಜಿ ಪಕ್ಷದ ಅಭ್ಯರ್ಥಿಗಳು ಕಣದಿಂದ ಹಿಂದೆ ಸರಿಯಲಿಲ್ಲ. ಇದರಿಂದ ಕಾಂಗ್ರೆಸ್ ನೇತೃತ್ವದ ಇಂಡಿಯಾ ಒಕ್ಕೂಟದ ಪಕ್ಷಗಳ ಮತಗಳು ವಿಭಜನೆಯಾಗಲಿವೆ ಎಂಬುದು ಸ್ಪಷ್ಟವಾಗಿದೆ.

# ಮತದಾನ ಹಕ್ಕಿಗಾಗಿ ತವರಿಗೆ ಧಾವಿಸುತ್ತಿರುವ ಕೇರಳಿಗರು

**ತಿರುವನಂತಪುರಂ:** ಕೊಲ್ಲಿ ರಾಷ್ಟ್ರಗಳಲ್ಲಿರುವ ಕೇರಳ ಮೂಲದ ಜನತೆ ಶುಕ್ರವಾರ ನಡೆಯಲಿರುವ ಲೋಕಸಭೆ ಚುನಾವಣೆಯಲ್ಲಿ ಮತ ಚಲಾಯಿಸಲು ಹೆಚ್ಚಿನ ಸಂಖ್ಯೆಯಲ್ಲಿ ತವರಿಗೆ ಮರಳುತ್ತಿದ್ದಾರೆ. ಭಾರೀ ನಿರೀಕ್ಷೆ ಹುಟ್ಟಿಸಿರುವ ಸಾರ್ವತ್ರಿಕ ಚುನಾವಣೆಯಲ್ಲಿ ತಮ್ಮ ಹಕ್ಕು ಚಲಾಯಿಸಲು ಏಪ್ರಿಲ್ 22-23 ರಂದು 22 ಸಾವಿರ ಅನಿವಾಸಿ ಭಾರತೀಯರು ಕೇರಳಕ್ಕೆ ಆಗಮಿಸಿದ್ದಾರೆ.

ರಾಜ್ಯದ ಮುಖ್ಯ ಚುನಾವಣಾಧಿಕಾರಿ ಕಚೇರಿ ಪ್ರಕಟಿಸಿದ ಮತದಾರರ ಅಂತಿಮ ಪಟ್ಟಿ ಪ್ರಕಾರ ಕೇರಳದಲ್ಲಿ 89,839 ನೋಂದಾಯಿತ ಎನ್‌ಆರ್‌ಐ ಮತದಾರರಿದ್ದಾರೆ. ಎನ್‌ಆರ್‌ಐ ಮತದಾರರಿಗೆ ಕೇರಳಕ್ಕೆ ಪ್ರಯಾಣಿಸಲು 12 ಚಾರ್ಟರ್ಡ್ ಫ್ಲೈಟ್ಗಳನ್ನು ಕಾಯ್ದಿರಿಸಲಾಗಿದೆ. ಕೊನೆಯ ಚಾರ್ಟರ್ಡ್ ವಿಮಾನ ಗುರುವಾರ ಯುಎಇ ಇಂದ ಹೊರಡಲಿದೆ.

ಕೇರಳದ ವಿವಿಧ ರಾಜಕೀಯ ಪಕ್ಷಗಳೊಂದಿಗೆ ಸಂಯೋಜಿತವಾಗಿರುವ ಅನೇಕ ವಲಸಿಗ ಸಂಘ-ಸಂಸ್ಥೆಗಳು ಕೈಗೆಟುಕುವ ದರದಲ್ಲಿ ವಿಮಾನ ಟಿಕೆಟ್ಗಳನ್ನು ಬುಕ್ ಮಾಡಲು ಟ್ರಾವೆಲ್ ಏಜೆನ್ಸಿಗಳೊಂದಿಗೆ ಸಹಕರಿಸಿವೆ ಎಂದು ಹೇಳಲಾಗಿದೆ.

ಕಾಂಗ್ರೆಸ್ ನೇತೃತ್ವದ ಯುಡಿಎಫ್ ಒಕ್ಕೂಟದ ಮೂಲಗಳ ಪ್ರಕಾರ, ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ಮತ್ತು ಕಾಂಗ್ರೆಸ್ಗೆ ಸಂಘಟನೆಗಳು, ಕೇರಳ ಮುಸ್ಲಿಂ ಕಲ್ಚರಲ್ ಸೆಂಟರ್ನಂತಹಗಲ್ಪ್ ಅತಿದೊಡ್ಡ ಭಾರತೀಯ ಡಯಾಸ್ಪೊರಾ ಸಂಘಟನೆ, ಪ್ರಿಯದರ್ಶಿನಿ ಕಾಂಗ್ರೆಸ್ ಮತ್ತು ಕರ್ತಾ ಮೂಲದ ಮತದಾರರ ಪ್ರಯಾಣಕ್ಕೆ ನೆರವಾಗಿದ್ದಾರೆ.

# ರಾಜಸ್ಥಾನ: ತನ್ನದೇ ಅಭ್ಯರ್ಥಿ ವಿರುದ್ಧ ಕಾಂಗ್ರೆಸ್ ಪ್ರಚಾರ!

**ಜೈಪುರ:** ಪ್ರಸಕ್ತ ಲೋಕಸಭಾ ಚುನಾವಣೆಯಲ್ಲಿ 2ನೇ ಹಂತದ ಮತದಾನ ಇದೇ ಶುಕ್ರವಾರ ನಡೆಯಲಿದೆ. ಈ ಹಂತದ ಚುನಾವಣೆಯಲ್ಲಿ ರಾಜಸ್ಥಾನದಲ್ಲಿ ನಡೆದಿರುವ ಅಚ್ಚರಿ ಎಂದರೆ, ಕಾಂಗ್ರೆಸ್ ತನ್ನದೇ ಅಭ್ಯರ್ಥಿ ವಿರುದ್ಧವಾಗಿ ಪ್ರಚಾರ ಮಾಡುತ್ತಿದೆ!

ಬುಡಕಟ್ಟು ಜನರು ಹೆಚ್ಚಾಗಿರುವ ಬನಸ್ವರ-ಡುಂಗರಪುರ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ತನ್ನ ಅಭ್ಯರ್ಥಿ ವಿರುದ್ಧವೇ ಪ್ರಚಾರ ಮಾಡುತ್ತಿದೆ. ತನ್ನ ಅಭ್ಯರ್ಥಿಗೆ ಮತ ಹಾಕದಂತೆ ಜನತೆಗೆ ಮನವಿ ಮಾಡುತ್ತಿದೆ.

ಕಾಂಗ್ರೆಸ್ ನಿಂದ ಅಧಿಕೃತ ಅಭ್ಯರ್ಥಿಯಾಗಿ ಅರವಿಂದ್ ದಾರ್ಮೋ ಸ್ಪರ್ಧಿಸಿದ್ದರೂ ಕಾಂಗ್ರೆಸ್ ಪಕ್ಷ ಮತ ಹಾಕಬೇಡಿ ಎಂದು ಕರೆ ನೀಡಿದೆ. ಪರಿಣಾಮ ಈಗ ಬಿಜೆಪಿ- ಕಾಂಗ್ರೆಸ್ ಹಾಗೂ ಭಾರತ್ ಆದಿವಾಸಿ ಪಕ್ಷ (ಬಿಎಪಿ) ನಡುವೆ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ.

ದಾರ್ಮೋ ಗೆ ಮತ ಚಲಾವಣೆಯಾದರೆ ಕಾಂಗ್ರೆಸ್ ನ ಮತಗಳು ವಿಭಜನೆಯಾಗಿ ಬಿಜೆಪಿ ಅಭ್ಯರ್ಥಿ ಮಹೇಂದ್ರಜಿತ್ ಸಿಂಗ್ ಮಾಲವೀಯಾಗೆ ಗೆಲ್ಲುವ ಸಾಧ್ಯತೆಗಳು ಹೆಚ್ಚಾಗಿವೆ.

ಏಕೆಂದರೆ, ಕಾಂಗ್ರೆಸ್ ಪಕ್ಷ ಹಲವು ತಿರುವುಗಳ ನಂತರ, ತನ್ನ ಅಭ್ಯರ್ಥಿಯನ್ನು ಘೋಷಿಸಿದ ಬಳಿಕ ಭಾರತ್ ಆದಿವಾಸಿ ಪಕ್ಷ (ಬಿಎಪಿ)ದ ಜತೆ ಮೈತ್ರಿ ಮಾಡಿಕೊಂಡಿತ್ತು. ಬಳಿಕ ಕಾಂಗ್ರೆಸ್-ಬಿಎಪಿ ಅಭ್ಯರ್ಥಿ ಸ್ಪರ್ಧಿಸಿದ್ದರು. ಆದರೆ ಕಾಂಗ್ರೆಸ್ ನ ಅಧಿಕೃತ ಅಭ್ಯರ್ಥಿ ಅರವಿಂದ್ ದಾರ್ಮೋ ನಾಮಪತ್ರ ಹಿಂಪಡೆಯುವುದಕ್ಕೆ ನಿರಾಕರಿಸಿ ಕಣದಲ್ಲೇ ಉಳಿದರು.

ಮೈತ್ರಿ ಹಿನ್ನೆಲೆಯಲ್ಲಿ ಕಾಂಗ್ರೆಸ್-ಬಿಎಪಿ ಹಾಗೂ ಬಿಜೆಪಿ ನಡುವೆ ನಡೆಯಬೇಕಿದ್ದ ಹಣಾಹಣಿ ಕಾಂಗ್ರೆಸ್ ಅಭ್ಯರ್ಥಿ ಸ್ಪರ್ಧಿಸಿರುವುದರ ಪರಿಣಾಮ ಮೈತ್ರಿ ಅಭ್ಯರ್ಥಿಗೆ ಸಮಸ್ಯೆಯಾಗಲಿದೆ. ದಾರ್ಮೋ ಗೆ ಮತ ಚಲಾವಣೆಯಾದರೆ ಕಾಂಗ್ರೆಸ್ ನ ಮತಗಳು ವಿಭಜನೆಯಾಗಿ ಬಿಜೆಪಿ ಅಭ್ಯರ್ಥಿ ಮಹೇಂದ್ರಜಿತ್ ಸಿಂಗ್ ಮಾಲವೀಯಾಗೆ ಅನುಕೂಲವಾಗಲಿದೆ. ಈ ಹಿನ್ನೆಲೆಯಲ್ಲಿ ಮೈತ್ರಿ ಅಭ್ಯರ್ಥಿಗೆ ಬೆಂಬಲಿಸುವ ಸಲುವಾಗಿ ಕಾಂಗ್ರೆಸ್ ತನ್ನದೇ ಅಭ್ಯರ್ಥಿ ವಿರುದ್ಧ ಪ್ರಚಾರದಲ್ಲಿ ತೊಡಗಿದೆ.

# ಉದ್ಯಮಿ ಮಿತ್ರರ 16 ಲಕ್ಷ ಕೋಟಿ ಸಾಲ ಮನ್ನಾ: ಮೋದಿ ದೇಶದ್ರೋಹ

## ಪ್ರಧಾನಿ ಮೇಲೆ ರಾಹುಲ್ ಗಾಂಧಿ ಟೀಕಾ ಪ್ರಹಾರ

**ದೆಹಲಿ:** ಪ್ರಧಾನಿ ನರೇಂದ್ರ ಮೋದಿ ತಮ್ಮ ಕೋಟ್ಯಾಧಿಪತಿ ಉದ್ಯಮಿ ಮಿತ್ರರ 1,60,00,00,00,00,000 (16 ಲಕ್ಷ



ಕೋಟಿ) ಸಾಲ ಮನ್ನಾ ಮಾಡುವ ಮೂಲಕ ದೇಶ ದ್ರೋಹ ಮಾಡಿದ್ದಾರೆ ಎಂದು ಕಾಂಗ್ರೆಸ್‌ನ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

ಬುಧವಾರ ಎಕ್ಸ್ ಸಂದೇಶವನ್ನು ಬರೆದಿರುವ ರಾಹುಲ್, ದೇಶದ ಜನರ ಗಾಯಕ್ಕೆ ಮದ್ದು ಆಗಬಹುದಾದ ಹಣವನ್ನು ಪ್ರಧಾನಿ ಹೀಗೆ ತಮ್ಮ ಶ್ರೀಮಂತ ಮಿತ್ರರ ಸಾಲ ಮನ್ನಾ ಕ್ಕೆ ಬಳಸಿರುವುದು ಎಷ್ಟು ಸರಿ? ಎಂದು ಪ್ರಶ್ನಿಸಿದ್ದಾರೆ. ದೇಶಕ್ಕೆ ಪ್ರಧಾನಿ ಮಾಡಿರುವ ದ್ರೋಹವನ್ನು ಜನತೆ ಎಂದಿಗೂ ಕ್ಷಮಿಸಲಾರರು ಎಂದು ಹೇಳಿದ್ದಾರೆ.

ಸಿರಿವಂತ ಕೈಗಾರಿಕೋದ್ಯಮಿಗಳ ಸಾಲ ಮನ್ನಾ ಕ್ಕೆ ಬಳಸಿದ ಹಣದಲ್ಲಿ 16 ಕೋಟಿ ಯುವಜನತೆ ಗೆ ಉದ್ಯೋಗ ನೀಡಬಹುದಿತ್ತು. ಇಲ್ಲವೇ 16 ಕೋಟಿ ಮಹಿಳೆಯರಿಗೆ ವರ್ಷಕ್ಕೆ 1 ಲಕ್ಷದ ಲೆಕ್ಕದಲ್ಲಿ ಆರ್ಥಿಕ ನೆರವು ನೀಡಿ 16 ಕೋಟಿ ಕುಟುಂಬಗಳ ಬದುಕನ್ನು ಸುಧಾರಿಸಬಹುದಿತ್ತು ಎಂದು ಕಾಂಗ್ರೆಸ್ ಮುಖಂಡ 'ಎಕ್ಸ್' ನಲ್ಲಿ ಬರೆದಿದ್ದಾರೆ.

ಇಲ್ಲವೇ 16 ಕೋಟಿ ರೈತರ ಕುಟುಂಬಗಳ ಸಾಲ ಮನ್ನಾ ಮಾಡುವ ಮೂಲಕ ಅಸಂಖ್ಯಾತ ರೈತರ ಆತ್ಮಹತ್ಯೆ ತಪ್ಪಿಸಬಹುದಿತ್ತು. ಅಷ್ಟೇ ಅಲ್ಲ, ಇಡೀ ದೇಶದ ಮನೆಗಳಿಗೆ 400 ರು ಲೆಕ್ಕದಲ್ಲಿ 20 ವರ್ಷಗಳ ಕಾಲ ಅಡುಗೆ ಅನಿಲ ಸಿಲಿಂಡರ್ ಒದಗಿಸಲು ಬಹುದಿತ್ತು. ಅದೂ ಬೇಡ ಎಂದಾಗಿದ್ದರೆ ಭಾರತ ಸೇನೆಯ ಪೂರ್ಣ ವೆಚ್ಚವನ್ನು 3 ವರ್ಷಗಳ ಕಾಲ ನಿರ್ವಹಣೆ ಮಾಡ ಬಹುದಿತ್ತು ಎಂದು ರಾಹುಲ್ ಅಭಿಪ್ರಾಯಪಟ್ಟಿದ್ದಾರೆ.

ಅದೂ ಸಾಧ್ಯವಿಲ್ಲ ಎನ್ನುವುದಾದರೆ ಬುಡಕಟ್ಟು, ದಲಿತ ಮತ್ತು ಹಿಂದುಳಿದ ವರ್ಗದ ಮಕ್ಕಳಿಗೆ ಪದವಿ ವರೆಗೂ ಉಚಿತವಾಗಿ ಶಿಕ್ಷಣ ನೀಡಲು ಸಾಧ್ಯವಾಗುತ್ತಿತ್ತು. ಇದೇನ ನ್ನು ಮಾಡದೆ ಪ್ರಧಾನಿ ಮೋದಿ ಜನರ ತೆರಿಗೆ ಹಣವನ್ನು ತಮ್ಮ ಶ್ರೀಮಂತ ಉದ್ಯಮಿಗಳ ಕೋಟ್ಯಾಂತರ ರು. ಸಾಲ ಮನ್ನಾಕ್ಕೆ ಬಳಸಿಕೊಂಡಿರುವುದು ಎಷ್ಟು ಸರಿ? ಎಂದು ರಾಹುಲ್ ಗಾಂಧಿ ಪ್ರಶ್ನಿಸಿದ್ದಾರೆ.

ಇವನ್ನು ಅರ್ಥ ಮಾಡಿಕೊಂಡು ಮತದಾರರು ಕಾಂಗ್ರೆಸ್ಸಿಗೆ ಮತ ಹಾಕಬೇಕು. ಆ ಮೂಲಕ ದೇಶದಲ್ಲಿ ಕಾಂಗ್ರೆಸ್ ಸರಕಾರವನ್ನು ಆಡಳಿತಕ್ಕೆ ತರಬೇಕು ಎಂದು ರಾಹುಲ್ ಮನವಿ ಮಾಡಿದ್ದಾರೆ.

# ಅಭ್ಯರ್ಥಿ ಸುನೇತ್ರಾಗೆ ಕ್ಲೀನ್ ಚಿಟ್

## 25 ಸಾವಿರ ಕೋಟಿ ರು. ಸಹಕಾರಿ ಬ್ಯಾಂಕ್ ಹಗರಣ | ಬಾರಾಮತಿ ಲೋಕಸಭಾ ಕ್ಷೇತ್ರ ಎನ್ ಸಿಪಿ ಅಭ್ಯರ್ಥಿ | ಡಿಸಿಎಂ ಅಜಿತ್ ಪವಾರ್ ಪತ್ನಿ ಸುನೇತ್ರಾ ಪವಾರ್

**ಮುಂಬೈ:** ಮಹಾರಾಷ್ಟ್ರದಲ್ಲಿ ಜಿಲ್ಲಾ ಸಹಕಾರಿ ಬ್ಯಾಂಕ್ ನಲ್ಲಿ ನಡೆದ 25 ಸಾವಿರ ಕೋಟಿ ರು. ಹಗರಣದಲ್ಲಿ ಆರೋಪ ಎದುರಿಸುತ್ತಿದ್ದ ಉಪ ಮುಖ್ಯಮಂತ್ರಿ (ಡಿ ಸಿ ಎಂ) ಅಜಿತ್ ಪವಾರ್ ಪತ್ನಿ ಸುನೇತ್ರಾ ಪವಾರ್ ಅವರಿಗೆ ದೊಡ್ಡ ರಿಲೀಫ್ ಸಿಕ್ಕಿದೆ.



ಹಗರಣಕ್ಕೆ ಸಂಬಂಧಿಸಿದಂತೆ ಮುಂಬೈ ಪೊಲೀಸ್‌ನ ಆರ್ಥಿಕ ಅಪರಾಧ ವಿಭಾಗ ಡಿ ಸಿ ಎಂ ಅಜಿತ್ ಪವಾರ್ ಅವರ ಪತ್ನಿಗೆ ಕ್ಲೀನ್ ಚಿಟ್ ನೀಡಿದೆ. ಎನ್ಸಿಪಿ ಸುನೇತ್ರಾ ಪವಾರ್ ಅವರನ್ನು ಬಾರಾಮತಿ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯನ್ನಾಗಿ ಮಾಡಿದೆ. ಚುನಾವಣೆಗೂ ಮುನ್ನವೇ ಕ್ಲೀನ್ಚಿಟ್ ಪಡೆದ ಸುನೇತ್ರಾ, ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ. ಈ ಕ್ಷೇತ್ರದಲ್ಲಿ ಸುನೇತ್ರಾ ಪವಾರ್ ಅವರು ಶರದ್ ಪವಾರ್ ಅವರ ಪುತ್ರಿ ಮತ್ತು ಹಾಲಿ ಸಂಸದೆ ಸುಪ್ರಿಯಾ ಸುಳೆ ವಿರುದ್ಧ ಸ್ಪರ್ಧಿಸುತ್ತಿದ್ದಾರೆ.

ಆರ್ಥಿಕ ಅಪರಾಧ ವಿಭಾಗ (ಇಒಡಬ್ಲ್ಯು) ಸಲ್ಲಿಸಿರುವ ವರದಿಯಲ್ಲಿ, ಜರಂದೇಶ್ವರ ಶುಗರ್ ಮಿಲ್ಸ್ ಪ್ರೈ. ಲಿ.ನ ಆಸ್ತಿಯನ್ನು ಜರಂದೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ ಸರಕುಗಳಿಂದ ಬಾಡಿಗೆಗೆ ತೆಗೆದುಕೊಳ್ಳುವಲ್ಲಿ ಯಾವುದೇ ಕಾನೂನುಬಾಹಿರ ಚಟುವಟಿಕೆ ನಡೆದಿಲ್ಲ ಎಂದು ಹೇಳಲಾಗಿದೆ. ಅದಲ್ಲದೆ, ಅಜಿತ್ ಪವಾರ್ ಅವರ ಸೋದರಳಿಯನಿಗೂ ಇಒಡಬ್ಲ್ಯು ಕ್ಲೀನ್ ಚಿಟ್ ನೀಡಿದೆ

ರಾಜ್ಯದ ಸಹಕಾರಿ ಸಕ್ಕರೆ ಸಂಘಗಳ ಜಿಲ್ಲಾ ಸಹಕಾರಿ ಬ್ಯಾಂಕ್‌ಗಳು, ಕಬ್ಬು ಕಟಾವು ಗಿರಣಿಗಳು ಮತ್ತು ರಾಜ್ಯದ ಇತರ ಸಂಸ್ಥೆಗಳೊಂದಿಗಿನ ಹಣದ ವಹಿವಾಟಿಗೆ ಸಂಬಂಧಿಸಿದೆ.

ಸುನೇತ್ರಾ ಮತ್ತು ರೋಹಿತ್ ಪವಾರ್ ವಿರುದ್ಧ ದಾಖಲಾಗಿರುವ ಎಫ್‌ಐಆರ್‌ನಲ್ಲಿ, ಬ್ಯಾಂಕ್ನಲ್ಲಿ ಅಕ್ರಮ ವಹಿವಾಟಿನಿಂದಾಗಿ ರಾಜ್ಯದ ಖಜಾನೆಗೆ 25,000 ಕೋಟಿ ರು. ನಷ್ಟವಾಗಿದೆ ಎಂದು ಹೇಳಲಾಗಿದೆ.

ಸಕ್ಕರೆ ಕಾರ್ಖಾನೆಗಳಿಗೆ ಅತ್ಯಂತ ಕಡಿಮೆ ದರದಲ್ಲಿ ಸಾಲ ನೀಡುವಲ್ಲಿ ಮತ್ತು ಸುಸ್ತಿದಾರರ ಆಸ್ತಿಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡುವಲ್ಲಿ ಬ್ಯಾಂಕಿಂಗ್ ಮತ್ತು ಆರ್‌ಬಿಐ ನಿಯಮಗಳನ್ನು ಉಲ್ಲಂಘಿಸಲಾಗಿದೆ ಎಂದು ಆರೋಪಿಸಲಾಗಿದೆ.

ಪ್ರಕರಣವನ್ನು ಪರಿಶೀಲಿಸುತ್ತಿರುವ ಇಒಡಬ್ಲ್ಯು 2020 ರಲ್ಲಿ ನ್ಯಾಯಾಲಯಕ್ಕೆ ಮೊದಲ ವರದಿ ಸಲ್ಲಿಸಿತ್ತು, ಆದರೆ ನಂತರ ಅಜಿತ್ ಪವಾರ್ ಮತ್ತು ಸೋದರಳಿಯ ರೋಹಿತ್ ಪವಾರ್ ಅವರನ್ನು ತನಿಖೆ ಮಾಡಲು ಪ್ರಕರಣವನ್ನು ಪುನಃ ತೆರೆಯಲು ಇಒಡಬ್ಲ್ಯು ಮತ್ತೆ ನ್ಯಾಯಾಲಯವನ್ನು ಸಂಪರ್ಕಿಸಿತ್ತು. ನಂತರ, ಪ್ರಕರಣವನ್ನು ಮುಚ್ಚುವಂತೆ ಒತ್ತಾಯಿಸಿ ಇಒಡಬ್ಲ್ಯು ಜನವರಿಯಲ್ಲಿ 2ನೇ ವರದಿ ಸಲ್ಲಿಸಿತು. ಹೆಚ್ಚಿನ ತನಿಖೆ ನಡೆಸಲು ಅಜಿತ್ ಪವಾರ್ ಸೇರಿದಂತೆ ಯಾರ ವಿರುದ್ಧವೂ ಯಾವುದೇ ಸಾಕ್ಷ್ಯಗಳು ಸಿಕ್ಕಿಲ್ಲ ಎಂದು ವರದಿಯಲ್ಲಿ ಹೇಳಲಾಗಿದೆ.

## ಚುನಾವಣೆ ಚುರುಮುರಿ

### ಪ್ರಚಾರದಲ್ಲಿ ಯಾರು ಏನೆಂದರು?



ಗೋವಾ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಭಾರತದ ಸಂವಿಧಾನ ಗೋವಾಕ್ಕೆ ಅನ್ವಯಿಸುವುದಿಲ್ಲ. ಸಂವಿಧಾನವನ್ನು ಗೋವಾ ಮೇಲೆ ಹೇರಲಾಗಿದೆ ಎನ್ನುತ್ತಾರೆ. ಇದುಡಾ. ಅಂಬೇಡ್ಕರ್ ಹಾಗೂ ದೇಶದ ಸಂವಿಧಾನಕ್ಕೆ ಮಾಡಿದ ಅವಮಾನವಲ್ಲವೇ? ಇಂದು ಗೋವಾದಲ್ಲಿ ಸಂವಿಧಾನವನ್ನು ಅವಮಾನಿಸುತ್ತಾರೆ. ನಾಳೆ ಇಡೀ ದೇಶದಲ್ಲೇ ಸಂವಿಧಾನವನ್ನು ತುಚ್ಛವಾಗಿ ಕಾಣುತ್ತಾರೆ. ದೇಶವನ್ನು ವಿಭಜಿಸುವ ಸಂಚು ಕಾಂಗ್ರೆಸ್ನದು.

**- ನರೇಂದ್ರ ಮೋದಿ**
ಪ್ರಧಾನಿ



ಪುಲ್ವಾಮಾದಲ್ಲಿ ಹುತಾತ್ಮರಾದ ಸೈನಿಕರ ಪತ್ನಿಯರ ಮಂಗಳಸೂತ್ರವನ್ನು ಕಿತ್ತುಕೊಂಡವರು ಯಾರು? ಕೇಸರಿ ಪಕ್ಷ ಉತ್ತರಿಸಬೇಕು. ಮಂಗಳಸೂತ್ರದ ಬಗ್ಗೆ ಮಾತನಾಡುವವರು ಪುಲ್ವಾಮಾ ಘಟನೆಯ ಬಗ್ಗೆಯೂ ಮಾತನಾಡಬೇಕು. ನಮ್ಮ ಸೈನಿಕರು ಹುತಾತ್ಮರಾಗಿದ್ದಾರೆ ಮತ್ತು ಅವರ ಪತ್ನಿಯರ ಮಂಗಳಸೂತ್ರವನ್ನು ಕಸಿದುಕೊಳ್ಳಲಾಗಿದೆ. ಪುಲ್ವಾಮಾ ಘಟನೆಯ ಹಿಂದೆ ಯಾರಿದ್ದಾರೆಂದು ದೇಶದ ಜನರಿಗೆ ಉತ್ತರಿಸಬೇಕು? ಘಟನೆಯ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

**- ಡಿಂಪಲ್ ಯಾದವ್**
ಸಮಾಜವಾದಿ ಪಕ್ಷದ ನಾಯಕಿ



ಪ್ರಧಾನಿ ನರೇಂದ್ರ ಮೋದಿ ಅವರಿಗೆ ಈಗ ರಾತ್ರಿ ಸರಿಯಾಗಿ ನಿದ್ರೆ ಬರುತ್ತಿಲ್ಲ, ಏಕೆಂದರೆ ಅವರು ಕನಸಿನಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಕಂಡು ಹೆದರಿಕೊಂಡಿದ್ದಾರೆ. ಹಾಗಾಗಿಯೇ ಮೋದಿ ಗೆ ಸರಿಯಾಗಿ ನಿದ್ರೆ ಮಾಡಲು ಆಗುತ್ತಿಲ್ಲ. ಮೊದಲ ಹಂತದ ಚುನಾವಣೆ ಮುಗಿದ ಬಳಿಕ ಮೋದಿ ಧೈರ್ಯ ಕಳೆದುಕೊಂಡಿದ್ದಾರೆ.

**- ಮಲ್ಲಿಕಾರ್ಜುನ ಖರ್ಗೆ**
ಕಾಂಗ್ರೆಸ್ ಅಧ್ಯಕ್ಷ



ದೇಶದಲ್ಲಿನ ಯಾವುದೇ ಶಕ್ತಿಯಿಂದಲೂ ಜಾತಿ ಗಣತಿಯನ್ನು ತಡೆಯಲು ಸಾಧ್ಯವಿಲ್ಲ. ಕಾಂಗ್ರೆಸ್ ನೇತೃತ್ವದ ಇಂಡಿಯ ಒಕ್ಕೂಟ ಕೇಂದ್ರದಲ್ಲಿ ಅಧಿಕಾರಕ್ಕೆ ಬರುವುದು ನಿಶ್ಚಿತ. ಅದೇ ವೇಳೆ ನೂತನ ಕೇಂದ್ರ ಸರಕಾರ ಜಾತಿ ಗಣತಿಯನ್ನು ಮಾಡಿಸುವುದು ಖಚಿತ. ದೇಶದಲ್ಲಿ ಎಲ್ಲಾ ರಾಜ್ಯಗಳಲ್ಲಿಯು ಜಾತಿ ಗಣತಿ ನಡೆಸಿ ಜಾರಿಗೊಳಿಸಲು ಕಾಂಗ್ರೆಸ್ ಬದ್ಧವಾಗಿದೆ.

**- ರಾಹುಲ್ ಗಾಂಧಿ**
ಕಾಂಗ್ರೆಸ್ ಮುಖಂಡ



ಈಗಿನ ಲೋಕಸಭೆ ಚುನಾವಣೆಗೆ ಕಾಂಗ್ರೆಸ್ ಪಕ್ಷ ಬಿಡುಗಡೆ ಮಾಡಿದ ಪ್ರಣಾಳಿಕೆ ಬಹಳ ಜನಪರವಾಗಿದೆ. ಕಾಂಗ್ರೆಸ್ ಪ್ರಣಾಳಿಕೆ ಬಿಜೆಪಿಯ ಶಕ್ತಿಯನ್ನು ಕುಗ್ಗಿಸಿದೆ. ಹಾಗಾಗಿಯೇ ಬಿಜೆಪಿ ನಾಯಕರು ತಾಳ್ಮೆ ಕಳೆದುಕೊಂಡು ಹತಾಶರಾಗಿ ವರ್ತಿಸುತ್ತಿದ್ದಾರೆ. ಕೋಮು ದ್ವೇಷ ಉಂಟು ಮಾಡಲು ಯತ್ನಿಸುತ್ತಿದ್ದಾರೆ.

**- ಮೆಹಬೂಬಾ ಮುಫ್ತಿ**
ಪಿಡಿಪಿ ಅಧ್ಯಕ್ಷೆ